# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 703 (822) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಚ್.ಎಂ. ರಮೇಶ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15-12-2020 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವೈಜ್ಞಾನಿಕವಾಗಿ ಘನ ತ್ಯಾಜ್ಯ ನಿರ್ವಹಣೆಯನ್ನು ಮಾಡಲಾಗುತ್ತಿದೆಯೇ;</td><td>• ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಯ ಪ್ರಸಕ್ತ ಸ್ಥಿತಿ ಈ ಕೆಳಕಂಡಂತಿದೆ.
<table>
<tr><td>ಒಟ್ಟು ನಗರ ಸ್ಥಳೀಯ ಸಂಸ್ಥೆಗಳು</td><td>290</td></tr>
<tr><td>ಒಟ್ಟು ತ್ಯಾಜ್ಯ ಉತ್ಪಾದನೆ (ಟಿ.ಪಿ.ಡಿ)</td><td>11085</td></tr>
<tr><td>ಒಟ್ಟು ವಾರ್ಡುಗಳ ಸಂಖ್ಯೆ</td><td>6606</td></tr>
<tr><td>ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆ-ಯಾಗುತ್ತಿರುವ ವಾರ್ಡುಗಳ ಸಂಖ್ಯೆ</td><td>6426</td></tr>
<tr><td>ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆ-ಯಾಗುತ್ತಿರುವ ವಾರ್ಡುಗಳ ಸಂಖ್ಯೆ</td><td>4342</td></tr>
<tr><td>ಒಟ್ಟು ತ್ಯಾಜ್ಯ ಸಂಸ್ಕರಣೆ (ಟಿ.ಪಿ.ಡಿ)</td><td>5339</td></tr>
</table></td></tr>
<tr><td>ಆ</td><td>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಎಷ್ಟು ಘನತ್ಯಾಜ್ಯ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ;<br>(ಸಂಪೂರ್ಣ ವಿವರ ನೀಡುವುದು)</td><td>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು 171 ಘನತ್ಯಾಜ್ಯ ಘಟಕಗಳು ಭಾಗಶಃ ಕಾರ್ಯನಿರ್ವಹಿಸುತ್ತಿದ್ದು. ಸಂಪೂರ್ಣ ಘನತ್ಯಾಜ್ಯ ನಿರ್ವಹಣೆಗಾಗಿ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಸಮಗ್ರ ಘನತ್ಯಾಜ್ಯ ನಿರ್ವಹಣೆ ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಿದ್ದು. ಇದುವರೆವಿಗೂ ಒಟ್ಟು 219 ನಗರಗಳಿಗೆ ಸೇರಿದ ಒಟ್ಟಾರೆ 9159 ಟಿಪಿಡಿ ತ್ಯಾಜ್ಯ ಸಂಸ್ಕರಣಾ ಸಾಮರ್ಥ್ಯದ ಹಾಗು ರೂ. 1501.31 ಕೋಟಿಗಳ ಅಂದಾಜು ಯೋಜನಾ ಮೊತ್ತದ ವಿಸ್ತೃತ ಯೋಜನಾ ವರದಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. (ನಗರ ಸ್ಥಳೀಯ ಸಂಸ್ಥೆಗಳ ಸಿವಿಲ್ ಕಾಮಗಾರಿ ಮತ್ತು ವಾಹನ ಯಂತ್ರೋಪಕರಣಗಳ ಖರೀದಿ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.)</td></tr>
<tr><td>ಇ</td><td>ಘನತ್ಯಾಜ್ಯ ನಿರ್ವಹಣೆಗೆ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು; ಹಾಗೂ ಖರ್ಚಾದ ಹಣ ಎಷ್ಟು?<br>(ಸಂಪೂರ್ಣ ವಿವರ ನೀಡುವುದು)</td><td>ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಘನತ್ಯಾಜ್ಯ ನಿರ್ವಹಣೆಗೆ ರೂ. 261.84 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು ಅದರಲ್ಲಿ ರೂ. 89.50 ಅನುದಾನವು ವೆಚ್ಚವಾಗಿರುತ್ತದೆ. (ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.)</td></tr>
</table>

ಸಂಖ್ಯೆ: ನಅಇ 335 ಸಿಎಸ್ಎಸ್ 2020

(ಡಾ|| ನಾರಾಯಣಗೌಡ)
ಮಾನ್ಯ ಪೌರಾಡಳಿತ ಹಾಗೂ
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.